(ಇಂದು ದಿನಾಂಕಃ 01–07–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಪಿ ಪಿ ವಕೀಲರಿಂದ ಃ -

1) ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವೆಗೆ ತಕರಾರು ನಾನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಈಗ ತಮ್ಮ ಪ್ರತಿವಾದ ಪತ್ರವನ್ನು ತೋರಿಸಿ ಅದರಲ್ಲಿ ನಾನು ಸಹಿ ಮಾಡಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಯಾವುದೇ ತಕರಾರು ಸಲ್ಲಿಸದೇ ಇದ್ದರು ಸಹ ಸಲ್ಲಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಕೇವಲ 2 ನೇ ಪ್ರತಿವಾದಿ ದಾವೆಯಲ್ಲಿ ತಕರಾರು ಸಲ್ಲಿಸಿರುತ್ತಾನೆ ಅಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಬರೆದ ವಿಷಯಗಳು ತಿಳಿದಿರುತ್ತವೆ. ಓದಿ ತಿಳಿದುಕೊಂಡಿರುತ್ತೇನೆ.

2) ಪ್ರತಿವಾದ ಪತ್ರದಲ್ಲಿ ಸುಳ್ಳು ವಂಶಾವಳಿಯನ್ನು ತೋರಿಸಿರುತ್ತೇನೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನಗೆ ತಮ್ಮನಾಗಬೇಕು ಎಂದು ನುಡಿದು ನಂತರ ನನ್ನ ಅಜ್ಜನಾಗಬೇಕು ಎಂದು ನುಡಿಯುತ್ತಾರೆ. ವಂಶಾವಳಿಯಲ್ಲಿ ಅಜ್ಜಿಯ ಉಲ್ಲೇಖವಿರುವುದಿಲ್ಲ ಎಂದರೆ ಸರಿ. ನನ್ನ ಅಜ್ಜಿ ಹನುಮವ್ವ ಇರುತ್ತಾರೆ. ಉದ್ದೇಶ ಪೂರಕವಾಗಿ ಅವರ ಹೆಸರು ನಮೂದು ಮಾಡಿರುವುದಿಲ್ಲ. ನನ್ನ ಅಜ್ಜಿಯ ಬಗ್ಗೆ ದಾವೆಯಲ್ಲಿ ವಿವರಣೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡುತ್ತಿಲ್ಲ.

3) ವಂಶಾವಳಿಯಲ್ಲಿ ತೋರಿಸಿದ ಹಾಗೆ ಮೂಲ ಪುರುಷ ನಿಂಗಪ್ಪನಿಗೆ ಮಲ್ಲಪ್ಪ ಎಂಬ ಮಗ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸರಿ. ನ್ಯಾಯಾಲಯಕ್ಕೆ ಸತ್ಯತೆಯನ್ನು ಮುಚ್ಚಿಡಲು ನಾವು ವಂಶಾವಳಿಯಲ್ಲಿ ಮೂಲ ಪುರುಷ ನಿಂಗಪ್ಪನಿಗೆ ಮಲ್ಲಪ್ಪ ಎಂಬ 3 ನೇ ಮಗ ಇರುತ್ತಾನೆ ಎಂದು ಸುಳ್ಳಾಗಿ ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿಯು ಏನನ್ನು ಸಹ ಕಾಣಿಸಿರುವುವುದಿಲ್ಲ ಎಂದು ನುಡಿಯುತ್ತಾರೆ.

4) ಮೂಲ ಪುರುಷ ನಿಂಗಪ್ಪನಿಗೆ ಹನುಮಪ್ಪ, ಪರಪ್ಪ ಹಾಗೂ ಯಲ್ಲಪ್ಪ ಎಂಬ ಮೂರು ಮಕ್ಕಳು ಎಂದರೆ ಸರಿ. ಮಲ್ಲಪ್ಪ ಎಂಬ ಮಗ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸರಿ. ನನ್ನ ಅಜ್ಜ ನಿಂಗಪ್ಪ, ನನ್ನ ತಂದೆ ಹನುಮಪ್ಪ, ನನ್ನ ಚಿಕ್ಕಪ್ಪ ಪರಪ್ಪ ಮತ್ತು ಯಲ್ಲಪ್ಪ ಮರಣ ಹೊಂದಿರುತ್ತಾರೆ ಎಂದರೆ ಸರಿ. ಮೂಲ ಪುರುಷ ನಿಂಗಪ್ಪನು 29-03-1959 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಮೂಲ ಪುರುಷನ ಮರಣದ ನಂತರ ನನ್ನ ಅಜ್ಜಿಯು ಸಹ ಮರಣ

ಹೊಂದಿರುತ್ತಾರೆ ಎಂದರೆ ಸರಿ. ಸದರಿಯವರು ಮರಣ ಹೊಂದಿ ಈಗ ಸುಮಾರು 50 ವರ್ಷ ಕಳೆದಿರುತ್ತದೆ ಎಂದರೆ ಸರಿ.

5) ಮೂಲ ಪುರುಷನ ಮರಣದ ನಂತರ ಆಸ್ತಿಗಳು ವಾರಸಾನಾತೆಯಿಂದ ಆತನ ಮಕ್ಕಳ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ಮಕ್ಕಳು ತಮ್ಮ ಕುಟುಂಬದ ಸಮೇತ ಜಂಟಿ ಕಬ್ಜಾ ವಹಿವಾಟಿನಲ್ಲಿ ಉಳುಮೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ನಮ್ಮ ಮನೆತನದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿದ ಆಸ್ತಿ ಇರುವುದಿಲ್ಲ ಎಂದರೆ ಸರಿ.

6) 2 ನೇ ಪ್ರತಿವಾದಿಯು ಅವಿವಾಹಿತ ಹಾಗೂ ಸಂತಾನವಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು ನವಲಗುಂದದ ನಿವಾಸಿಯಾಗಿದ್ದು ಆತನು ಬಸ್ಸ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯರು ಒಂದೇ ಕುಟುಂಬದ ಸದಸ್ಯರು ಎಂದರೆ ಸರಿ. ನನ್ನ ತಂದೆಯ ಜೀವಿತ ಅವಧಿಯಲ್ಲಿ ಯಾವುದೇ ಪಾಲುವಿಭಾಗವಾಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಮರಣದ ನಂತರ ಸಹ ವಾದಿ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಯಾವುದೇ ಪಾಲುವಿಭಾಗವಾಗಿರುವುದಿಲ್ಲ ಎಂದರೆ ಸರಿ.

7) ನನ್ನ ತಂದೆಯವರ ಮರಣದ ನಂತರ ನನ್ನ ಸಹೋದರಿಯರು ನನ್ನ ಬಳಿ ಪಾಲುವಿಭಾಗದ ಪ್ರಸ್ತಾವಣೆ ಮಾಡಿದರು ಸಹ ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ನನ್ನ ಸಹೋದರಿಯರು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವುದಾದರು ಪಾಲುವಿಭಾಗದ ಸಂಬಂದ ದಾಖಲೆಗಳನ್ನು ನ್ಯಾಯಾಲಯದ ಎದುರು ಹಾಜರು ಪಡಿಸಿಲ್ಲ.

8) ಪ್ರತಿವಾದ ಪತ್ರದ 13 ಮತ್ತು 14 ನೇ ಕಂಡಿಕೆಯಲ್ಲಿ ನಮೂದು ಮಾಡಿದಂತಹ ಹಣದ ವ್ಯವಹಾರದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ವಿಷಯಗಳನ್ನು ನಾನು ಪ್ರತಿವಾದ ಪತ್ರದಲ್ಲಿ ಸುಳ್ಳಾಗಿ ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಮಗಳ ಹಾಗೂ ವಾದಿಯ ಮಗನ ವಿವಾಹ ವಿಚ್ಛೇದನವಾಗಿರುತ್ತದೆ ಎಂದರೆ ಸರಿ.

9) ಬಾಳವ್ವ ಮರಣ ಹೊಂದಿರುತ್ತಾಳೆ. ಸದರಿಯವರು ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನೋಂದಾಯಿತ ದಾಖಲೆಗಳು ಇರುವುದಿಲ್ಲ ಚಾವಡಿಯಲ್ಲಿ ಮಾಡಿದ್ದು ಇರುತ್ತುದೆ. ನಾವು ದಾಖಲೆಗಳನ್ನು ಸೃಷ್ಟಿ ಮಾಡಿಸಿರುತ್ತೇವೆ ಬಾಳವ್ವ ರವರು ಎಂದಿಗೂ ಹಕ್ಕು ಬಿಟ್ಟು ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಬಾಳವ್ವ ರವರು ಎಂದಿಗೂ ಹಕ್ಕು ಬಿಟ್ಟು ಕೊಟ್ಟಿರುವುದಿಲ್ಲ ನಾವು ಕಲ್ಪನೆ ಮಾಡಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ.

10) ವಾದಿಗೆ ಆಸ್ತಿಯಿಂದ ವಂಚನೆ ಮಾಡಬೇಕು, ಹಾಗೂ ಅವರಿಗೆ ನಷ್ಟ ಮಾಡಬೇಕೆಂಬ ದೂರುದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವೆಯಲ್ಲಿ ನಮಗೆ ಅನುಕೂಲವಾಗುವಂತಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಒಬ್ಬನೇ ಕಬಳಿಸಬೇಕೆಂಬ ದೂರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

11) 2 ನೇ ಪ್ರತಿವಾದಿಯು ಹುಟ್ಟಿನಿಂದಲೇ ಮಾನಸಿಕವಾಗಿ ಅಸ್ವಸ್ಥನಿರುತ್ತಾನೆ. ಆತನೂ ಸಹ ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿ. ಆತನಿಗೆ ಸರಿ ತಪ್ಪಿನ ವ್ಯತ್ಯಾಸ ತಿಳಿಯುದಿಲ್ಲ ಎಂದರೆ ಸರಿ. ಆತನು ಸಹಿ ಮಾಡು ಎಂದರೆ ಎಲ್ಲಿ ಬೇಕಾದರೂ ಸಹಿ ಮಾಡುತ್ತಾನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಗೆ ಹಕ್ಕು ಹಿತಾಶಕ್ತಿ ಇದ್ದರು ಸಹ, ಇಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ</u>**.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**